**ಕರ್ನಾಟಕ ಸರ್ಕಾರ**

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಸಂಖ್ಯೆ: ಪಪೂಶಿಇ/ ಶೈ.ಶಾ-4/ಮಾಧ್ಯಮ-2/2017-18 ದಿನಾಂಕ: 09-10-2017.

**ಸುತ್ತೋಲೆ**

**ವಿಷಯ**:-ಪಿಯು ತರಗತಿಯ ವಿದ್ಯಾರ್ಥಿಗಳು ತಾವು ಆಯ್ಕೆ ಮಾಡಿಕೊಂಡ ಪರೀಕ್ಷಾ ಮಾಧ್ಯಮವಲ್ಲಿಯೇ ಮಧ್ಯಂತರ ಹಾಗೂ ಪೂರ್ವ ಸಿದ್ಧತಾ ಪರೀಕ್ಷೆಯನ್ನು ನಡೆಸುವ ಬಗ್ಗೆ.

ಉಲ್ಲೇಖ:- 1.ಈ ಕಛೇರಿ ಸುತ್ತೋಲೆ ಸಂಖ್ಯೆ: ಪಪೂಶಿಇ/ ಶೈ.ಶಾ-4/ಮಾಧ್ಯಮ-2/2017-18 ದಿನಾಂಕ: 01-09-2017.

2.ಈ ಕಛೇರಿ ಪರಿಷ್ಕೃತ ಸುತ್ತೋಲೆ ಸಂಖ್ಯೆ: ಪಪೂಶಿಇ/ ಶೈ.ಶಾ-4/ಮಾಧ್ಯಮ-2/2017-18 ದಿನಾಂಕ: 23-09-2017.

-----

ಉಲ್ಲೇಖಿತ ಸುತ್ತೋಲೆಯಂತೆ 2017-2018 ನೇ ಸಾಲಿನಲ್ಲಿ ರಾಜ್ಯದಲ್ಲಿನ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ತಾವು ಬರೆಯಬೇಕಾದ ಪರೀಕ್ಷೆಯ ಮಾಧ್ಯಮವಾಗಿ ಕನ್ನಡ ಅಥವಾ ಇಂಗ್ಲೀಷನ್ನು ಆಯ್ಕೆ ಮಾಡಿಕೊಳ್ಳುವುದನ್ನು ಕಡ್ಡಾಯ ಮಾಡಲಾಗಿರುತ್ತದೆ.

ಈ ಸಂಬಂಧ, ವಿದ್ಯಾರ್ಥಿಗಳು 2017 ರ ವಾರ್ಷಿಕ ಪರೀಕ್ಷೆಯಲ್ಲಿ ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿ ಪರೀಕ್ಷೆ ಬರೆಯಲು ಅಭ್ಯಾಸವಾಗಲು ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ನಡೆಸಲಾಗುವ ಮಧ್ಯಂತರ ಪರೀಕ್ಷೆ ಹಾಗೂ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಮಾಧ್ಯಮದಲ್ಲಿಯೇ ನಡೆಸಲು ಸೂಚಿಸಿದೆ.

ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಮಾಧ್ಯಮದಲ್ಲಿ ಮಾತ್ರ ಆಯಾ ವಿಷಯಗಳ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ, ಮುದ್ರಿಸಿ, ಪರೀಕ್ಷೆಗಳನ್ನು ನಡೆಸಲು ಈ ಮೂಲಕ ಸೂಚಿಸಲಾಗಿದೆ. ಈ ಕ್ರಮದಿಂದ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯನ್ನು ಅವರು ಆಯ್ಕೆ ಮಾಡಿಕೊಂಡಿರುವ ಪರೀಕ್ಷಾ ಮಾಧ್ಯಮದಲ್ಲಿ ಉತ್ತರಿಸಲು ಅನುಕೂಲವಾಗುತ್ತದೆ.

9/10/17

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಎಲ್ಲಾ ಕಾಲೇಜಿನ ಪ್ರಾಂಶುಪಾಲರಿಗೆ- ಮುಂದಿನ ಕ್ರಮಕ್ಕಾಗಿ
2. ಇ- ಆಡಳಿತ ಶಾಖೆ- ಅಂತರಜಾಲದಲ್ಲಿ ಅಳವಡಿಸಲು.

ಪ್ರತಿಗಳು ಮಾಹಿತಿಗಾಗಿ

3. ಜಂಟಿ ನಿರ್ದೇಶಕರು, ಶೈಕ್ಷಣಿಕ/ಪರೀಕ್ಷೆ/ಮಾ&ಅ, ಪ.ಪೂ.ಶಿ.ಇಲಾಖೆ.
4. ನಿರ್ದೇಶಕರು ಆಪ್ತಶಾಖೆ.
5. ಕಛೇರಿ ಪ್ರತಿ